# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 117(100)
ಸದಸ್ಯರ ಹೆಸರು : ಶ್ರೀ ಡಿ.ಟಿ ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ)
ಉತ್ತರಿಸುವ ದಿನಾಂಕ : 11-08-2025
ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 01-04-2006ರ ನಂತರ ನೇಮಕಗೊಂಡ ಅನುದಾನಿತ ನೌಕರರಿಗೆ NPS ಮತ್ತು OPS ಕೂಡ ಇಲ್ಲವಾದ್ದರಿಂದ NPS ರದ್ದು ಮಾಡಿ OPS ಜಾರಿ ಮಾಡುವ ಸಂದರ್ಭದಲ್ಲಿ ಅನುದಾನಿತ ನೌಕರರಿಗೆ ಕೂಡ ಯಥಾವತ್ತಾಗಿ ಜಾರಿಗೊಳಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ; (ಮಾಹಿತಿ ನೀಡುವುದು) | • ದಿನಾಂಕ:01-04-2006ರ ನಂತರ ನೇಮಕಗೊಂಡ ಸರ್ಕಾರಿ/ಅನುದಾನಿತ ನೌಕರರಿಗೆ NPS ಯೋಜನೆಯನ್ನು ಜಾರಿಗೊಳಿಸಲಾಗಿದ್ದು ಇವರುಗಳಿಗೆ ಪ್ರಸ್ತುತ NPS ಯೋಜನೆಯನ್ನು ರದ್ದುಪಡಿಸಿ OPS ಯೋಜನೆಯನ್ನು ಜಾರಿಗೊಳಿಸುವ ಬಗ್ಗೆ ಸರ್ಕಾರದಿಂದ ಯಾವುದೇ ಆದೇಶ ಆಗಿರುವುದಿಲ್ಲ. |
| ಆ) | ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ 2015ರ ನಂತರ ನೇಮಕಾತಿ ಆಗಿಲ್ಲದ ಕಾರಣ ಉಪನ್ಯಾಸಕರು ಇಲ್ಲದಿರುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | • 2015ರ ನಂತರದ ಹುದ್ದೆಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಇಪಿ 396 ಎಸ್ ಇ ಎಸ್ 2021 ದಿನಾಂಕ:07-08-2024ರ ಆದೇಶದಲ್ಲಿ ದಿನಾಂಕ :01-01-2016 ರಿಂದ 31-12-2020ರವರೆಗೆ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ನಿವೃತ್ತಿ, ನಿಧನ, ರಾಜಿನಾಮೆ ಮತ್ತು ಇತರೆ ಕಾರಣಗಳಿಂದ ತೆರವಾದ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆಯನ್ನು ಆನ್-ಲೈನ್ ಮೂಲಕವೇ ನಡೆಸುವಂತೆ ಆದೇಶಿಸಲಾಗಿದೆ. (ಅನುಬಂಧ-ಎ ಲಗತ್ತಿಸಿದೆ)<br>• ಈ ಕುರಿತು ಪ್ರಸ್ತುತ ಇಲಾಖೆಯಲ್ಲಿ ಯಾವುದೇ ತಂತ್ರಾಂಶ ಲಭ್ಯವಿಲ್ಲದೇ ಇರುವುದರಿಂದ ಹೊಸದಾಗಿ ತಂತ್ರಾಂಶವನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ.<br>• ಸದರಿ ತಂತ್ರಾಂಶವನ್ನು ಪ್ರಾಯೋಗಿಕವಾಗಿ ಪರೀಕ್ಷೆ ನಡೆಸಲು ಕೆಲವು ಕಾಲೇಜುಗಳಿಗೆ ಅವಕಾಶ ಕಲ್ಪಿಸಲಾಗಿದ್ದು, ಮಾಹಿತಿ ಪಡೆಯುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.<br>• ತಂತ್ರಾಂಶದಲ್ಲಿ ಕಂಡು ಬರುವ ನ್ಯೂನ್ಯತೆಗಳನ್ನು ಸರಿಪಡಿಸಿ, ಖಾಲಿ ಹುದ್ದೆ ಹೊಂದಿರುವ ಮತ್ತು ಸರ್ಕಾರವು ವಿಧಿಸಿರುವ ಮಾನದಂಡವನ್ನು ಪೂರೈಸುವ ಕಾಲೇಜುಗಳಿಂದ ಪ್ರಸ್ತಾವನೆಯನ್ನು ಪಡೆಯಲಾಗುವುದು.<br>• ಮುಂದುವರೆದು, ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 388 ಸೆನೆನಿ 2024 ದಿನಾಂಕ: 25-11-2024ರಲ್ಲಿ "ದಿನಾಂಕ: 28.10.2024 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ರಾಜ್ಯ ಸಿವಿಲ್ ಸೇವೆಗಳಲ್ಲಿ ಮೀಸಲಾತಿ ಅನ್ವಯವಾಗುವ ವೃಂದಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಹೊಸದಾಗಿ ಯಾವುದೇ ಅಧಿಸೂಚನೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೂ ಹೊರಡಿಸಬಾರದೆಂದು ಸೂಚಿಸಲಾಗಿದೆ" ಈ ಹಿನ್ನಲೆಯಲ್ಲಿ ಸರ್ಕಾರವು ಹುದ್ದೆ ಭರ್ತಿಗೆ ಅನುಮತಿ ನೀಡಿದ ನಂತರದಲ್ಲಿ ಕ್ರಮವಹಿಸಲಾಗುವುದು. (ಅನುಬಂಧ-ಬಿ ಲಗತ್ತಿಸಿದೆ) |
| ಇ) | ನೇಮಕಾತಿ ಇಲ್ಲದ ಕಾರಣ ಅನುದಾನಿತ ಕಾಲೇಜುಗಳ | ಅನುದಾನಿತ ಹುದ್ದೆಗಳಿಗೆ ನೇಮಕಾತಿ ಆಗದ್ದಿದ್ದಲ್ಲಿ ಸರ್ಕಾರಿ ಕಾಲೇಜುಗಳಿಗೆ ನಿಯೋಜಿಸುವುದನ್ನು ಸರ್ಕಾರದ ಆದೇಶ ಸಂಖ್ಯೆ: |

| | | |
|---|---|---|
| | ಉಪನ್ಯಾಸಕರನ್ನು ಸರ್ಕಾರಿ ಕಾಲೇಜುಗಳಿಗೆ ನಿಯೋಜನೆ ಮಾಡಲು ಕ್ರಮಕೈಗೊಳ್ಳಲಾಗಿದೆಯೇ; | ಇಪಿ 10 ಟಿಪಿಯು 2022 ದಿನಾಂಕ: 30-09-2023ರಲ್ಲಿ ಹಿಂಪಡೆಯಲಾಗಿದೆ, ಆದಾಗ್ಯೂ ಕಾರ್ಯಭಾರವನ್ನು ಸರಿದೂಗಿಸುವ ಸಂಬಂಧ ಹತ್ತಿರದ ಅನುದಾನಿತ ಕಾಲೇಜನಲ್ಲಿ ಖಾಲಿ ಇರುವ ಹುದ್ದೆಗೆದುರು ನಿಯೋಜಿಸಲು ಅವಕಾಶ ಇರುತ್ತದೆ. (ಅನುಬಂಧ-ಸಿ ಲಗತ್ತಿಸಿದೆ) |
| ಈ) | ಅನುದಾನಿತ ಪದವಿ ಪೂರ್ವ ಕಾಲೇಜುಗಳಿಗೆ 3% ನಲ್ಲಿ ಸೇವೆಗೆ ಸೇರಿದ ನೌಕರರು ನಿವೃತ್ತಿ ನಂತರ ಅವರ ಹುದ್ದೆ ರದ್ದಾಗುವುದು ಎಂದು ಇಲಾಖೆಯವರು ತಿಳಿಸಿದ್ದು, ರದ್ದಾದರೆ ಆ ಕಾಲೇಜಿನ ಮುಂದಿನ ಭವಿಷ್ಯವೇನು ಇದರ ಬಗ್ಗೆ ಸರ್ಕಾರದ ನಿಲುವೇನು; | ಸರ್ಕಾರದ ಆದೇಶ ಸಂಖ್ಯೆ: ಇಡಿ 19 ಟಿಪಿಯು 2004 ದಿನಾಂಕ: 01-02-2006ರನ್ವಯ "ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ಹೆಚ್ಚುವರಿ ವಿಷಯ/ವಿಭಾಗಕ್ಕೆ ಶೇ.3ರ ಅನುದಾನದ ಅಡಿಯಲ್ಲಿ ಹೆಚ್ಚುವರಿ ಹುದ್ದೆಗಳನ್ನು ವೇತನಾನುದಾನವನ್ನು ಒಳಪಡಿಸುವ ಯೋಜನೆಯನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಹಿಂದಕ್ಕೆ ಪಡೆಯಲಾಗಿದೆ. ಮತ್ತು ದಿನಾಂಕ: 28-10-1996ರ ಸರ್ಕಾರಿ ಆದೇಶ ಸಂಖ್ಯೆ. ಇಡಿ 155 ಎಸ್‌ಒಹೆಚ್ 95ರ ಆದೇಶವನ್ನು ಈ ಮೂಲಕ ಹಿಂದಕ್ಕೆ ಪಡೆದು ರದ್ದುಪಡಿಸಿದೆ.<br><br>ಇನ್ನು ಮುಂದೆ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಾಗಲೀ ಮತ್ತು ಪದವಿ ಪೂರ್ವ, ನಿರ್ದೇಶನಾಲಯದಲ್ಲಾಗಲೀ ಯಾವುದೇ ಹೆಚ್ಚುವರಿ ಶಿಕ್ಷಕರ ನೇಮಕಾತಿಯನ್ನು ಸದರಿ ಆದೇಶದ ಅಡಿಯಲ್ಲಿ ಮಾಡಕೂಡದು; ಹಾಗೇನಾದರೂ ಈ ಆದೇಶದಡಿಯಲ್ಲಿ ನೇಮಕಾತಿ ಕ್ರಮ ಮಾಡಿದಲ್ಲಿ ಸಂಬಂಧಪಟ್ಟವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕ್ರಮವಹಿಸಲಾಗುವುದು. ಈ ಆದೇಶದಡಿಯಲ್ಲಿ ಮಂಜೂರಾದ ಯಾವುದೇ ಹುದ್ದೆ ಖಾಲಿಯಾದಲ್ಲಿ ಅದನ್ನು ಸಂಪೂರ್ಣವಾಗಿ ಶಾಶ್ವತ ಅನುದಾನರಹಿತವೆಂದು ಪರಿಗಣಿಸಿ, ಈ ಸಂಬಂಧ ತಗಲುವ ವೆಚ್ಚಗಳನ್ನು, ಸರ್ಕಾರಕ್ಕೆ ಯಾವುದೇ ವೆಚ್ಚ ಬಾರದಂತೆ, ಸಂಬಂಧಿಸಿದ ಶಿಕ್ಷಣ ಸಂಸ್ಥೆಗಳೇ ಭರಿಸುವ ಷರತ್ತಿನೊಂದಿಗೆ ನೇಮಕಾತಿ ಮಾಡಿಕೊಳ್ಳತಕ್ಕದ್ದು" ಎಂದಿರುತ್ತದೆ(ಅನುಬಂಧ-ಡಿ ಲಗತ್ತಿಸಿದೆ).<br><br>ಈ ಹಿನ್ನಲೆಯಲ್ಲಿ, ಸಂಬಂಧಪಟ್ಟ ಆಡಳಿತ ಮಂಡಳಿಗಳು ಸರ್ಕಾರದ ಆದೇಶದಂತೆ ಕ್ರಮವಹಿಸಲು ಅವಕಾಶವಿರುತ್ತದೆ. |
| ಉ) | 2015ರ ನಂತರ ನೇಮಕಾತಿ ಮಾಡಿಕೊಳ್ಳಲು ಸರ್ಕಾರ 2020ರವರೆಗೆ ಆದೇಶಿದ್ದು ವಿಧಿಸಲಾದ ನಿಬಂಧನೆಗಳನ್ನು ಸಡಿಲಗೊಳಿಸಲು ಸರ್ಕಾರ ಕ್ರಮಕೈಗೊಂಡಿದೆಯೇ? | ಸರ್ಕಾರದ ಆದೇಶ ಸಂಖ್ಯೆ:ಇಪಿ 396 ಎಸ್ ಇ ಎಸ್ 2021, ದಿನಾಂಕ:07-08-2024ರಲ್ಲಿ ರಾಜ್ಯದ ಅನುದಾನಿತ ಪ್ರೌಢಶಾಲೆಗಳಲ್ಲಿ ದಿನಾಂಕ:01-01-2016 ರಿಂದ ದಿನಾಂಕ:31-12-2020 ರವರೆಗೆ ಖಾಲಿಯಾದ ಬೋದಕ ಹುದ್ದೆಗಳನ್ನು ಭರ್ತಿ ಮಾಡಲು ಆದೇಶಿಸಲಾಗಿದೆ.<br><br>ಸದರಿ ಆದೇಶದಲ್ಲಿ ವಿಧಿಸಲಾದ ಷರತ್ತುಗಳಲ್ಲಿನ ಯಾವುದೇ ನಿಬಂಧನೆಗಳನ್ನು ಸರ್ಕಾರದಿಂದ ಸಡಿಲಿಕೆ ಮಾಡಲಾಗಿರುವುದಿಲ್ಲ. |

ಸಂಖ್ಯೆ: ಇಪಿ 256 ಡಿಜಿಡಬ್ಲ್ಯೂ 2025

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು